ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ,
ಹುಣಸೂರು

**ಸಿ.ಸಿ. ನಂ.113/2017**

**ಸಿ.ಡಬ್ಲೂ-3 ಪಿ.ಡಬ್ಲೂ-6**

ದಿಃ **03.06.2024**ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿಯ ಹೆಸರು | ರಾಜೇಶ |
| ಗಂಡ/ತಂದೆಯ ಹೆಸರು | ನಾಗೇಗೌಡ |
| ವಯಸ್ಸು | ಸುಮಾರು **40** ವರ್ಷ |
| ಕೆಲಸ | ಗಾರೆ ಕೆಲಸ |
| ವಾಸಸ್ಥಳ | ಮೊದುರು ಪಿ ಕೊಪ್ಪಲು ಗ್ರಾಮ |

ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

**ಚಾಸಾ-1 ಮತ್ತು 2, 4 ಮತ್ತು 5 ಗೊತ್ತು. 1 ಮತ್ತು 2ನೇ ಆರೋಪಿತರು ನನ್ನ ಮಾವನ ಮಕ್ಕಳು. 3ನೇ ಆರೋಪಿ ನನ್ನ ಅತ್ತೆ. 4ನೇ ಆರೋಪಿ ನನ್ನ ಮಾವನ ಮಗಳು. ಈ ಪ್ರಕರಣದ ಯಾವುದೇ ಮಾಹಿತಿ ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಅವಾಚ್ಯವಾಗಿ ನಿಂದಿಸಿಲ್ಲ, ಹಲ್ಲೆ ಮಾಡಿಲ್ಲ, ಮುಂದಕ್ಕೆ ಚಲಿಸದಂತೆ ತಡೆ ಮಾಡಿಲ್ಲ. ಪ್ರಾಣ ಬೆದರಿಕೆ ಹಾಕಿಲ್ಲ. ನಾನು ಪೊಲೀಸರ ಸಮಕ್ಷಮ ಯಾವುದೇ ಹೇಳಿಕೆ ನೀಡಿಲ್ಲ. ನ್ಯಾಯಾಲಯದ ಮುಂದಿರುವ ದೊಣೆಣಯನ್ನು ಇಂದೇ ಮೊದಲ ಬಾರಿಗೆ ನೋಡುತ್ತಿದ್ದೇನೆ.**

**(ಈ ಹಂತದಲ್ಲಿ ಸಾಕ್ಷಿ ಪ್ರತಿಕೂಲ ಸಾಕ್ಷಿಯಾಗಿರುವುದರಿಂದ ಸ. ಸ. ಅ ರವರ ಪಾಟೀಸವಾಲಿಗಾಗಿ ಅನುಮತಿಯನ್ನು ಕೋರಿದ್ದು, ಆಲಿಸಿ ಅನುಮತಿಸಲಾಯಿತು.)**

ಪಾಟೀಸವಾಲು ಶ್ರೀ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ದಿಃ**28.04.2015** ರಂದು ಸಂಜೆ **5.00** ಗಂಟೆ ಸಮಯದಲ್ಲಿ ನೀವು ನಿಮ್ಮ ಜಮೀನಿನ ಬಳಿ ಕೆಲಸ ಮಾಡುತ್ತಿದ್ದಾಗ, ಚಾಸಾ-**1** ಅವರ

ಮನೆಯ ಮುಂದೆ ಅವರ ದನಗಳನ್ನು ಕಟ್ಟಿ ಹಾಕಿದ್ದ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆ ಸಮಯದಲ್ಲಿ 1 ರಿಂದ 4 ನೇ ಆರೋಪಿತರು ಚಾಸಾ-1 ಮತ್ತು 2 ರವರ ಮೇಲೆ ಏಕಾಏಕಿ ಗಲಾಟೆಗೆ ಹೋಗಿ, ಬೋಳಿ ಮಗನೇ, ಸೂಳೆ ಮುಂಡೆ ಅಂತ ಅವಾಚ್ಯ ನಿಂದಿಸಿದರು ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಅದಕ್ಕೆ ಚಾಸಾ-1 ಮತ್ತು 2 ರವರು ನಮ್ಮ ಜಾಗದಲ್ಲಿ ದನ ಕಟ್ಟಿ ಹಾಕಿದ್ದೇವೆ ಎಂದು ಹೇಳಿದಕ್ಕೆ 1ನೇ ಆರೋಪಿ ನ್ಯಾಯಾಲಯದ ಮುಂದೆ ಇರುವ ದೊಣ್ಣೆಯಿಂದ ಚಾಸಾ-1 ರವರ ಹಣೆ ಮತ್ತು ಬಲ ಕಾಲಿಗೆ ಹೊಡೆದನು ಎಂದರೆ ಸರಿಯಲ್ಲ. 2ನೇ ಆರೋಪಿ ಚಾಸಾ-1 ರವರನ್ನು ತಬ್ಬಿ ಹಿಡಿದುಕೊಂಡಾಗ ಬಿಡಿಸಲು ಹೋದ ಚಾಸಾ-2 ರವರಿಗೆ 3 ಮತುತ 4ನೇ ಆರೋಪಿತರು ಹಿಡಿದು ಎಳೆದಾಡಿ, ಕೈಗಳಿಂದ ಮೈಕೈಗೆ, ಎದೆ ಮತ್ತು ಹೊಟ್ಟೆಗೆ ಗುದ್ದಿ ನೋವುಂಟು ಮಾಡಿದರು ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಂತರ ಆರೋಪಿತರೆಲ್ಲಾ ಸೇರಿ ಚಾಸಾ-1 ಮತ್ತು 2 ರವರಿಗೆ ಕೊಲೆ ಮಾಡುವುದಾಗಿ ಬೆದರಿಕೆ ಹಾಕಿದರು ಎಂದರೆ ಸರಿಯಲ್ಲ.

ಅಷ್ಟರಲ್ಲಿ ಜಮೀನು ಬಳಿ ಇದ್ದ ನೀವು ಮತ್ತು ಚಾಸಾ-4 ಹೋಗಿ ಸಮಾದಾನ ಪಡಿಸಿದಿರಿ ಎಂದರೆ ಸರಿಯಲ್ಲ. ಆರೋಪಿತರು ದೊಣ್ಣೆ ಅಲ್ಲೆ ಬಿಸಾಡಿ ಹೋದರು ಎಂದರೆ ಸರಿಯಲ್ಲ. ಆರೋಪಿತರು ಗ್ರಾಮದ ಪಂಚಾಯಿತಿಯ ತೀರ್ಮಾನಕ್ಕೆ ಬಾರದೆ ಉಡಾಫೆ ಮಾಡಿದ್ದರಿಂದ ತಡವಾಗಿ ಬಂದು ಚಾಸಾ-1 ದೂರು ದಾಖಲಿಸಿರುತ್ತಾರೆಂದರೆ ಸರಿಯಲ್ಲ. ಆರೋಪಿತರು ಹೊಡೆಯಲು ಉಪಯೋಗಿಸಿದ ದೊಣ್ಣೆಯನ್ನು ನೋಡಿದರೆ ಗುರುತಿಸ ಬಲ್ಲೆಯೇ ಎಂದರೆ ಸರಿಯಲ್ಲ. ಈಗ ಓದಿ ಹೇಳಿದಂತೆ ದಿಃ04.09.2015 ರಲ್ಲಿ ಪೊಲೀಸರ ಸಮಕ್ಷಮ ಹೇಳಿಕೆ ನೀಡಿರುತ್ತೀರಾ ಎಂದರೆ ಸರಿಯಲ್ಲ. ಹೇಳಿಕೆಯ ಭಾಗವನ್ನು ನಿಪಿ-3 ಎಂದು ಗುರುತಿಸಲಾಯಿತು.

ಆರೋಪಿತರು ನಿಮ್ಮ ಸಂಬಂಧಿಕರಾಗಿದ್ದರಿಂದ ಅವರಿಗೆ ಸಹಾಯ ಮಾಡುವ ಉದ್ದೇಶದಿಂದ, ನಿಪಿ-3 ರಂತೆ ಹೇಳಿಕೆ ನೀಡಿದ್ದರೂ, ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

ಪಾಟೀಸವಾಲುಃ ಆರೋಪಿ ಪರ ಶ್ರೀ ಎಚ್.ಯು. ಬಿ. ವಕೀಲರಿಂದಃ

ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

ಮರುವಿಚಾರಣೆ ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸರಿ ಇದೆ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,
ಹುಣಸೂರು.